ಶ್ರೀ ಎಸ್.ಎ. ವಾಸನ್ನಶೆಟ್ಟಿ.–ಈಗ ಕಾಲೇಜುಗಳು ಪ್ರಾರಂಭವಾಗುವ ಸಂದರ್ಭದಲ್ಲಿ forward communityಗಳಿಗಿದ್ದ ಸೀಟುಗಳ ಸಂಖ್ಯೆಯನ್ನೂ ಕಡಮೆಮಾಡಿ ratio ಇಳಿಸುವುದಕ್ಕಿದ್ದ ಮಹತ್ತರ ಕಾರಣಗಳೇನು ?

ಶ್ರೀ ಎಸ್. ಆರ್. ಕಂಠಿ.—ಹೊಸದಾಗಿ ಆಗಿರುವ G.O.ನಲ್ಲಿ ಕಾರಣ ಕೊಟ್ಟಿದೆ. ಅದನ್ನು ನೋಡ ಬಹುದು.

ಒಬ್ಬ ಮಾನ್ಯಸದಸ್ಯರು.—ಇದನ್ನು ಎಲ್ಲಾ ವಿದ್ಯಾ ಸಂಸ್ಥೆಗಳಲ್ಲೂ ಅನ್ವಯಿಸುವಂತೆ ಮಾಡುತ್ತೀರೋ ಅಥವಾ ಸರ್ಕಾರಿ ವಿದ್ಯಾ ಸಂಸ್ಥೆಗಳಿಗೂ ಮಿಕ್ಕ ಖಾಸಗಿ ವಿದ್ಯಾಸಂಸ್ಥೆಗಳಿಗೂ ವ್ಯತ್ಯಾಸ ಮಾಡುತ್ತೀರೊ ?

ಶ್ರೀ ಎಸ್. ಆರ್. ಕಂಠಿ.—ಸರ್ಕಾರಿ ವಿದ್ಯಾ ಸಂಸ್ಥೆಗಳಲ್ಲಿ ಯಾವರೀತಿ ಅನ್ವಯವಾಗುತ್ತದೆಯೋ ಅದೇ ರೀತಿ ಎಲ್ಲಾ ಖಾಸಗಿ ವಿದ್ಯಾ ಸಂಸ್ಥೆಗಳಿಗೂ ಅನ್ವಯವಾಗುತ್ತದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಗಂಡು ಹುಡುಗರು ಇರತಕ್ಕ ಪಾಲಿಟೆಕ್ನಿಕ್‌ನಲ್ಲಿ ಸೀಟುಗಳನ್ನು 440ರಿಂದ 460ರ ವರೆಗೂ ಜಾಸ್ತಿ ಮಾಡಿದ್ದೀರಿ. ಹೆಣ್ಣುಮಕ್ಕಳು ಇರುವುದರಲ್ಲಿ 120ನ್ನಷ್ಟೇ ಏಕೆ ಇಟ್ಟಿದ್ದೀರಿ?

ಶ್ರೀ ಎಸ್. ಆರ್. ಕಂಠಿ.—ಅದು ಪಾಲಿಟೆಕ್ನಿಕ್‌ಗೆ ಬರುವ ಹೆಣ್ಣುಮಕ್ಕಳ ಸಂಖ್ಯೆಯಮೇಲೆ ಹೋಗುತ್ತದೆ.

ಶ್ರೀ ಬಿ. ಹುಚ್ಚೇಗೌಡ.—ಈ ಸರ್ಕಾರಿ ಹುಕುಮು ನಿನ್ನೆ ದಿವಸ ಆಗಿರುವ selectionಗಳಿಗೂ ಅನ್ವಯವಾಗುತ್ತದೆಯೇ ?

ಶ್ರೀ ಎಸ್. ಆರ್. ಕಂಠಿ.—ಈ ವರ್ಷದ selectionನ್ನಿಗೂ ಅನ್ವಯವಾಗುತ್ತೆ.

ಶ್ರೀಎಸ್.ಎ. ವಾಸನ್ನಶೆಟ್ಟಿ.—Forward class, Backward class ಮತ್ತು More Backward class ಎಂದು ಜಾತಿಯಮೇಲೆ ತೀರ್ಮಾನ ಮಾಡುವ ಬದಲು ಆರ್ಥಿಕ ಸ್ಥಿತಿಯಮೇಲೆ ವಿಂಗಡಣೆ ಮಾಡುವ ಬಗ್ಗೆ ಸರ್ಕಾರ ಕಾರ್ಯಕ್ರಮ ತೆಗೆದುಕೊಳ್ಳುತ್ತಿದೆಯೇ ?

Sri S. R. KANTHI.—That is a suggestion for action.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈಗ ತಾವು ಹೇಳಿದ ಈ ಸರ್ಕಾರಿ ಹುಕುಮು ಈ ವರ್ಷದ selection ಗಳಿಗೂ ಅನ್ವಯವಾಗುತ್ತದೆಂದು ಹೇಳಿದಿರಿ ಈ ವರ್ಷ ಈಗಾಗಲೇ ಅಗ್ರಿಕಲ್ಚರಲ್ ಕಾಲೇಜ್ ಮತ್ತು ವೆಟರಿನರಿ ಕಾಲೇಜುಗಳಲ್ಲಿ ಈ ಆರ್ಡರ್ ಬರುವುದಕ್ಕೆ ಮುಂಚೆಯೇ selectionಗಳಾಗಿ ಹುಡುಗರನ್ನು ತೆಗೆದುಕೊಂಡಿದ್ದಾರೆ. ಅವುಗಳ ಸಂಬಂಧದಲ್ಲಿ ತಾವೀಗ ಏನು ಮಾಡುತ್ತೀರಿ?

Sri S. R. KANTHI.—This order relates only to technical and professional colleges.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅದ್ದೇಗೆ ಅಗ್ರಿಕಲ್ಚರಲ್ ಕಾಲೇಜು ಮತ್ತು ವೆಟರಿನರಿ ಕಾಲೇಜುಗಳು ಟೆಕ್ನಿಕಲ್ ಮತ್ತು ಪ್ರೊಫೆಷನಲ್ ಕಾಲೇಜುಗಳಲ್ಲ?

Mr. SPEAKER.—Supplementaries can arise only out of the answers supplied to the question and not out of the Order.

1-30 P.M.

Sri S. SIVAPPA.—The Hon'ble Minister said that Agricultural College and Veterinary College are not technical colleges. Is he in order ?

Mr. SPEAKER.—I have ruled out that supplementary and so the answer falls to the ground.

Sri S. SIVAPPA.—Is he in order in saying so ? Are they technical colleges or not ?

Mr. SPEAKER.—The Leader of the Opposition is simply asking me for a ruling. He connot get a ruling from me. Is there a point of order if a wrong answer is given ?

Sri S. SIVAPPA.—How else can I have redress ?

Sri C. J. MUCKANNAPPA.—There is a sort of apprehension in the minds of the people when the Government say that Agricultural College and Veterinary College of Bangalore are not technical colleges.

Mr. SPEAKER.—If the Hon'ble Member repeats and says it is a point of order, I cannot accept it.

Package Programme in Mandya District.

*Q.—480. Sri G. MADE GOWDA (Malavalli).—

Will the Government be pleased to state :—

(*a*) when the Package Programme in Mandya District was given effect to ;

(*b*) what is the progress so far made in this respect ;

(*c*) whether this Package Programme would cover the entire District in the first year itself ?

A.—Sri G. NARAYANA GOWDA (Minister for Agriculture).—

(*a*) From 1st January 1962.

(*b*) (1) 8,911 Simple Farm Production Plans have been prepared and processed. For 2,558 plans, credit has been arranged through Co-operative Agencies, aggregating to Rs. 8,05,993.

(2) Composite Demonstration Plots for Paddy and Ragi have been selected and nurseries laid.

(3) Training of field workers, village leaders and progressive growers at the district level and in Malavalli Taluk was completed. In other Taluks, similar training has been programmed.

(c) No.

ಶ್ರೀ ಜಿ. ಮಾದೇಗೌಡ.—(b) ಪ್ರಶ್ನೆಗೆ ಉತ್ತರವಾಗಿ ೮,೯೧೧ Simple Farm Production Plans have been prepared and processed. For 2,558 plans credit has been arranged through Co-operative Agencies, aggregating to Rs. 8,05,993 ಎಂದು ಹೇಳಿದ್ದೀರಿ. ಈ ಯೋಜನೆಯನ್ನು ತಯಾರು ಮಾಡಿರುವುದು ಪ್ಲಾನಿನಲ್ಲಿದೆ. ಅದನ್ನು ಕಾರ್ಯಗತ ಮಾಡಿರುವುದು ಬರೀ ಪೇಪರಿನ ಮೇಲೆ ಇದೆಯೆಂದು ಇದರ ಅರ್ಥವೇ ?

ಶ್ರೀ ಜಿ. ನಾರಾಯಣಗೌಡ.—ಈಗ ಸ್ವಲ್ಪ ಇಫರ್‌ಮೇಷನ್ ಕೊಟ್ಟರೆ ಮಾನ್ಯ ಸದಸ್ಯರಿಗೆ ತೃಪ್ತಿ ಆಗಬಹುಧು ಎಂದು ತೋರುತ್ತದೆ. ಪ್ಲಾನ್ ಪ್ರಾವಿಜನ್ಸ್‌ನಲ್ಲಿ ಖರ್ಚಾಗುವುದಕ್ಕೋಸ್ಕರ ಸ್ವಲ್ಪ ಸ್ಯಾಫಿನ ಕೊರತೆ ಇದ್ದುದರಿಂದ ಹೋದ ತಿಂಗಳು 10ನೇ ತಾರೀಕು ಅಧಿಕಾರಿಗಳ ಸಭೆಯನ್ನು ಕರೆದು ಅಲ್ಲಿಯ ಜಿಲ್ಲಾಧಿಕಾರಿಗಳಿಗೆ ಕೆಲವು ಫೈನಾನ್ಸ್ ಮತ್ತು ಅಡ್ಮಿನಿಸ್ಟ್ರೇಟೀವ್ ಪವರ್ಸ್ ಅನ್ನು ಅವರಿಗೆ ಡೆಲಿಗೇಟ್‌ಮಾಡಿ ಅವರು ಈ ಕಾರ್ಯದಲ್ಲಿ ಮುಂದುವರಿಯುವುದಕ್ಕೆ ಅವರಿಗೆ ಹೇಳಲಾಯಿತು. ೧೩ನೇ ತಾರೀಖಿನಿಂದ ಈಚೆಗೆ ೮,೯೧೧ ಪ್ರೊಡಕ್ಷನ್ ಪ್ಲಾನ್ಸ್ ತಯಾರಾಗಿ ಅದರಲ್ಲಿ ೨,೫೫೮ ಪ್ಲಾನಿಗೆ ೮೦೫,೯೯೩ ರೂಪಾಯಿಗಳನ್ನು ಸಾಲ ಕೊಟ್ಟಿದೆ.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—2,558 ಪ್ಲಾನುಗಳು ಎಂದು ಹೇಳಿದಿರಿ. ಅದು ಎಷ್ಟು ಎಕರೆ ಕವರ್ ಆಗುತ್ತದೆ ?

ಶ್ರೀ ಜಿ. ನಾರಾಯಣಗೌಡ.—ಆ ಇಫರ್ ಮೇಷ್ ಈಗ ನನ್ನ ಹತ್ತಿರ ಇಲ್ಲ.

ಶ್ರೀ ಜಿ. ಮಾದೇಗೌಡ.—1-1-1962ರಲ್ಲಿ ಜಾರಿಗೆ ಬಂದ ಯೋಜನೆಯನ್ನು 13-7-1962ರಲ್ಲಿ ಅದರಲ್ಲಿ ಕೆಲವು ಯೋಜನೆಗಳನ್ನು ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೀರಿ. ಈಗಾಗಲೇ ಏಳು ತಿಂಗಳು ಗತಿಸಿ ಹೋಗಿವೆ. ಇದುವರೆಗೂ ಆ ಯೋಜನೆಯನ್ನು ಕಾರ್ಯಗತ ಮಾಡುವುದಕ್ಕೆ ಪ್ರಯತ್ನಮಾಡದೆ ಇರುವುದಕ್ಕೆ ಸರ್ಕಾರಕ್ಕೆ ಇದ್ದಂಥ ಅಡ್ಡಿ ಆತಂಕಗಳೇನು ?

ಶ್ರೀ ಜಿ. ನಾರಾಯಣಗೌಡ.—ಡಿಮ್ಯಾಂಡಿನ ಮೇಲೆ ಮಾತನಾಡುವಾಗ ಇದಕ್ಕೆ ಉತ್ತರ ಕೊಟ್ಟಿದ್ದೇನೆ. ಇಂಥಾ ಕೆಲವು ಯೋಜನೆಗಳನ್ನು ಕಾರ್ಯಗತಮಾಡಬೇಕಾದರೆ ಪ್ರಾರಂಭ ದೆಸೆಯೊಳಗೆ ಸ್ವಲ್ಪ ಕಷ್ಟಗಳಿರುತ್ತವೆ. ಸರಿಯಾದ ಸ್ಟಾಫ್ ಬೇಕು, ಟೆಕ್ನಿಕಲ್ ಪೀಪಲ್ ಸಿಕ್ಕ ಬೇಕಾಗುತ್ತದೆ. ಇಂಥಾ ಕೆಲವು ಕಷ್ಟಗಳಿರುವುದರಿಂದ ಸ್ವಲ್ಪ ಸಮಯ ಅದರೊಳಗೆ ವ್ಯಯವಾಗಿದೆ. ಈಗ ಸರಿಯಾಗಿ ಕಾರ್ಯಕ್ರಮ ತೆಗೆದುಕೊಂಡು ಅದನ್ನು ಪ್ರಾರಂಭಮಾಡಿದ್ದೇವೆ.

Sri M. C. BASAPPA.—What are the requisites of a Simple Farm Production Plan ?

ಶ್ರೀ ಜಿ. ನಾರಾಯಣಗೌಡ.—ಅಗ್ರಿಕಲ್‌ಚರಿಸ್ಟ್ಸ್ ರಿಕ್ವೈರ್‌ಮೆಂಟ್ಸ್ ಏನು, ಎಷ್ಟು ಎಕರೆ ಜಮೀನಿದೆ, ಎಷ್ಟು ಎಕರೆ ಜಮೀನಿನೊಳಗೆ ಇರಿಜೆನ್‌ಸೀಪ್ ಕಲ್ಟಿವೇಷನ್ ಮಾಡುತ್ತಾರೆ, ಅದಕ್ಕೆ ಮೆನ್ಯೂರ್ ಎಷ್ಟು ಬೇಕು, ಕಾಸ್ಟ್‌ಆಫ್ ಪ್ರೊಡಕ್ಷನ್ನಿಗೆ ಎಷ್ಟು ಸಾಲ ಬೇಕು ಎನ್ನುವುದೆಲ್ಲಾ ಅದರೊಳಗೆ ಸೇರುತ್ತದೆ.

ಶ್ರೀ ಜೆ. ದೇವಯ್ಯ.—ಮಂಡ್ಯ ಡಿಸ್ಟ್ರಿಕ್ಟಿಗೆ ವ್ಯವಸಾಯಕ್ಕೆ ಬೇಕಾದ ಉಪ್ಪು, ಗೊಬ್ಬರ, ಬೂದಿ ಇವುಗಳಿಗೆ ಎಷ್ಟು ರೂಪಾಯಿಗಳು ಬೇಕೆಂದು ಸರ್ವೆ ಮಾಡಿದ್ದೀರಿ ?

ಶ್ರೀ ಜಿ. ನಾರಾಯಣಗೌಡ.—ಅವರಿಗೆ ಬೇಕಾಗಿರುವುದಕ್ಕಿಂತ ಹೆಚ್ಚಿಗೆ ನಮ್ಮಲ್ಲಿ ಸ್ಟಾಕು ಇದೆ.

ಶ್ರೀ ಜೆ. ದೇವಯ್ಯ.—ಪ್ಯಾಕೇಜ್ ಕಾರ್ಯಕ್ರಮಕ್ಕೆ ಈಗಾಗಲೇ 8 ಲಕ್ಷ ಚಿಲ್ಲರೆ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದೀರಿ. ಅದನ್ನು ಸಕಾಲದಲ್ಲಿ ಕೊಟ್ಟಿದ್ದೀರೋ ಅಥವಾ ಅದನ್ನು ಕೊಡಲಿಕ್ಕೆ ಕಾಗದದ ಮೇಲೆ ಇದೆಯೋ ?

ಶ್ರೀ ಜಿ. ನಾರಾಯಣಗೌಡ.—ಎರಡು ಸಾವಿರ ಚಿಲ್ಲರೆ ಪ್ಲಾನುಗಳಿಗೆ 8 ಲಕ್ಷ ಚಿಲ್ಲರೆ ರೂಪಾಯಿಗಳನ್ನು ಕೊಟ್ಟಿದೆ.

ಶ್ರೀ ಜೆ. ದೇವಯ್ಯ.—ಆ ಅನುಕೂಲತೆಗಳು ಸಕಾಲದಲ್ಲಿ ರೈತರಿಗೆ ಸಿಕ್ಕುವಂತೆ ಸರ್ಕಾರದವರು ಕ್ರಮವನ್ನು ತೆಗೆದುಕೊಳ್ಳುತ್ತಾರೆಯೇ ?

ಶ್ರೀ ಜಿ. ನಾರಾಯಣಗೌಡ.—ನೋಡುತ್ತೇನೆ.

ಶ್ರೀ ಎಂ. ಸಿ. ಬಸಪ್ಪ.—ಸರ್ಕಾರದವರು ಪ್ಲಾನ್ ತಯಾರುಮಾಡಿದ ಮೇಲೆ ಆ ಪ್ಲಾನ್ ಪ್ರಕಾರವಾಗಿ ರೈತರಿಗೆ ಸಂಪೂರ್ಣವಾಗಿ ಸಲಕರಣೆಯನ್ನು ಕೊಡುತ್ತಾರೆಯೋ ಅಥವಾ ಅರ್ಧಂಬರ್ಧ ಕೊಡುತ್ತಾರೆಯೋ ?

ಶ್ರೀ ಜಿ. ನಾರಾಯಣಗೌಡ.—ಅವರಿಗೆ ಏನು ಬೇಕಾಗುತ್ತದೆಯೋ ಅದನ್ನು ಕೊಡುತ್ತೇವೆ.

ಶ್ರೀ ಜಿ. ಮಾದೇಗೌಡ.—ಆ ಯೋಜನೆಗೆ ಬೇಕಾದ ಸಿಬ್ಬಂದಿ ವರ್ಗದವರು, ಎಂದರೆ ವಿಲೇಜ್ ಲೆವೆಲ್ ವರ್ಕರ್ಸ್ ಇತ್ಯಾದಿಯವರನ್ನು ಅಲ್ಲಿಗೆ ನೇಮಕ ಮಾಡಿಲ್ಲ ಎನ್ನುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಜಿ. ನಾರಾಯಣಗೌಡ.—ನಮಗೆ ಗ್ರಾಮ ಸೇವಕರು ನೂರು ಮಂದಿ ಬೇಕಾಗಿತ್ತು, ಈಗ 20 ಮಂದಿ ಗ್ರಾಮ ಸೇವಕರನ್ನು ಅಪಾಯಿಂಟ್‌ಮಾಡಿ ಕೊಂಡು ಅಲ್ಲಿಗೆ ಪೋಸ್ಟ್‌ಮಾಡಿದೆ.

ಶ್ರೀ ಎಸ್. ನುಬ್ಬಯ್ಯನಾಯಕ್.—ಈ ಪ್ಯಾಕೇಜ್ ಡೀಲ್ ಎಷ್ಟು ಅವಧಿಯೊಳಗೆ ಜಾರಿಯಲ್ಲಿರುತ್ತದೆ ?

ಶ್ರೀ ಜಿ. ನಾರಾಯಣಗೌಡ.—ಪ್ಲಾನ್ ಅವಧಿಯೊಳಗೆ ಇರುತ್ತದೆ.

Sri C. J. MUCKANNAPPA.—May I know the acreage covered by the package scheme ?

ಶ್ರೀ ಜಿ. ನಾರಾಯಣಗೌಡ.—ಇದು ಒಂದು ಜಿಲ್ಲೆಯೊಳಗೆ ಒಂದು ಲಕ್ಷ ೪೭ ಸಾವಿರ ಎಕರೆ ತರಿ ಜಮೀನು ಕವರ್ ಆಗುತ್ತದೆ. ಒಂದು ಲಕ್ಷ ೭೪ ಸಾವಿರ ಎಕರೆ ಖುಷ್ಕಿ ಜಮೀನು ಕವರ್ ಆಗುತ್ತದೆ.

ಶ್ರೀ ಡಿ. ಎಂ. ಸಿದ್ದಯ್ಯ.—ಈ ಪ್ಲಾನಿಗೋಸ್ಕರ ಖರ್ಚುಮಾಡತಕ್ಕ ಒಟ್ಟು ಮೊಬಲಗೆಷ್ಟು ? ಎಷ್ಟು ವರ್ಷಗಳಲ್ಲಿ ಅದನ್ನು ಖರ್ಚುಮಾಡುತ್ತೀರಿ ?

ಶ್ರೀ ಜಿ. ನಾರಾಯಣಗೌಡ.—ನುಮಾರು 5 ಕೋಟಿ ರೂಪಾಯಿಗಳನ್ನು ಪ್ಲಾನ್ ಪೀರಿಯಡ್‌ನಲ್ಲಿ ಎಂದರೆ 5 ವರ್ಷಗಳೊಳಗೆ ಖರ್ಚು ಮಾಡುತ್ತೇವೆ.

ಶ್ರೀ ಜಿ. ಮಾದೇಗೌಡ.—ಪ್ಯಾಕೇಜ್ ಕಾರ್ಯಕ್ರಮ ಮಂಡ್ಯ ಜಿಲ್ಲೆ ಪೂರ್ತಿ ಕವರ್ ಆಗುತ್ತದೆಯೆಂದು ಅಪ್ಪಣ್ ಕೊಡಿಸಿದಿರಿ. ಎಷ್ಟು ವರ್ಷಗಳೊಳಗೆ ಈ ಜಿಲ್ಲೆ ಪೂರ್ತಿ ಕವರ್ ಆಗುತ್ತದೆ? ಯಾವ ಯಾವ ವರ್ಷ ಯಾವ ಯಾವ ತಾಲ್ಲೂಕು ತೆಗೆದುಕೊಳ್ಳಬೇಕೆಂದು ಯೋಚನೆ ಮಾಡಿದ್ದೀರಿ?

ಶ್ರೀ ಜಿ. ನಾರಾಯಣಗೌಡ.—ಪ್ಲಾನ್ ಪೀರಿಯಡ್‌ನೊಳಗೆ ಪೂರ್ತಿ ಜಿಲ್ಲೆ ಕವರ್ ಆಗುತ್ತದೆ. ಒಂದು ತಾಲ್ಲೂಕಿಗೆ ಪ್ರತಿ ವರ್ಷ 30 ಭಾಗದಷ್ಟು ತೆಗೆದುಕೊಳ್ಳುತ್ತೇವೆ.

ಶ್ರೀ ಜಿ. ಮಾದೇಗೌಡ.—ಪ್ರತಿ ವರ್ಷವೂ ಒಂದೊಂದು ತಾಲ್ಲೂಕಿನಲ್ಲಿ ಮೂವತ್ತು ಭಾಗದಷ್ಟು ತೆಗೆದುಕೊಳ್ಳುತ್ತೇವೆಂದು ಹೇಳಿದ್ದೀರಿ, ಈ ವರ್ಷವೇ ಪೂರ್ತಿ ಜಿಲ್ಲೆಯನ್ನು ತೆಗೆದುಕೊಳ್ಳುವುದಕ್ಕೆ ಇರತಕ್ಕ ಎದರು ತೊಡರುಗಳೇನು?

ಶ್ರೀ ಜಿ. ನಾರಾಯಣಗೌಡ.—ನಾನು ಈಗಾಗಲೇ ಹೇಳಿದ ಹಾಗೆ ಒಂದು ತಾಲ್ಲೂಕಿನೊಳಗೆ ನೂರಕೆ ಮೂವತ್ತು ಭಾಗದಷ್ಟನ್ನು ಪ್ರತಿ ವರ್ಷವೂ ತೆಗೆದು ಕೊಂಡು ಮಾಡುವವರಾಗಿದ್ದೇವೆ. ಪ್ಲಾನ್ ಪೀರಿಯಡ್‌ನಲ್ಲಿ 5 ವರ್ಷಗಳೊಳಗೆ ಎಲ್ಲವೂ ಪೂರ್ತಿ ಆಗುತ್ತದೆ.

Sri K. S. SURYANARAYANA RAO.—Supplementary to (*b*) Composite Demonstration Plots for Paddy and Ragi have been selected and nurseries laid ಎಂದು ಹೇಳಿದ್ದಾರೆ. ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಮಾಡಿದ್ದೀರಿ?

ಶ್ರೀ ಜಿ. ನಾರಾಯಣಗೌಡ.—ಯಾವ ಯಾವ ತಾಲ್ಲೂಕಿನಲ್ಲಿ ಮಾಡಿದೆ ಎಂಬುದನ್ನು ಹೇಳುವುದಕ್ಕೆ ಆ ಇ ಫರ್‌ಮೇಷನ್ ಈಗ ನನ್ನಲ್ಲಿ ಇಲ್ಲ. ಒಟ್ಟಿನಲ್ಲಿ 700 ಪ್ಲಾಟುಗಳನ್ನು ನಾವು ತಯಾರುಮಾಡಿ ಕೊಂಡಿದ್ದೇವೆ.

ಶ್ರೀ ಬಿ. ಹುಚ್ಚೇಗೌಡ.—ಈ ಯೋಜನೆಗೋಸ್ಕರ 5 ಕೋಟಿ ರೂಪಾಯಿಗಳನ್ನು ಖರ್ಚುಮಾಡುತ್ತೇವೆಂದು ಹೇಳಿದ್ದೀರಿ. ಆ 5 ಕೋಟಿ ರೂಪಾಯಿಗಳಲ್ಲಿ ಸಬ್ಸಿಡಿ ಕೊಡುವುದು ಎಷ್ಟು, ಲೋನ್ ಮೂಲಕ ಕೊಡುವುದು ಎಷ್ಟು, ಎಸ್ಟಾಬ್ಲಿಷ್‌ಮೆಂಟಿಗೋಸ್ಕರ ವಾಗಿ ಖರ್ಚುಮಾಡುವುದೆಷ್ಟು?

ಶ್ರೀ ಜಿ. ನಾರಾಯಣಗೌಡ.—ಇದರಲ್ಲಿ ನಮ್ಮ ಸರ್ಕಾರದವರು ಖರ್ಚು ಮಾಡುವುದು ೨೨.೨೫ ಲಕ್ಷ ರೂಪಾಯಿಗಳು.

ಶ್ರೀ ಬಿ. ಹುಚ್ಚೇಗೌಡ.—ಇದರಲ್ಲಿ ರೈತರಿಗೆ ಸಾಲದ ರೂಪವಾಗಿ ಎಷ್ಟು ಕೊಡುತ್ತೀರಿ, ಫ್ರೀಯಾಗಿ ಎಷ್ಟು ಕೊಡುತ್ತೀರಿ? ಆ ಯೋಜನೆಗಾಗಿ ಸರ್ಕಾರದವರು ಖರ್ಚುಮಾಡತಕ್ಕ 5 ಕೋಟಿ ರೂಪಾಯಿಗಳಲ್ಲಿ ರೈತರು ವಾಪಸ್ಸು ಮಾಡುವುದೆಷ್ಟು?

ಶ್ರೀ ಜಿ. ನಾರಾಯಣಗೌಡ.—ಸಾಲ ಕೊಟ್ಟಿದ್ದನ್ನು ವಾಪಸ್ಸು ಮಾಡುತ್ತಾರೆ.

Sri M. C. BASAPPA.—I want a clarification My doubt is how much subsidy, how much returnable loan is spent over Package Scheme?

ಶ್ರೀ ಜಿ. ನಾರಾಯಣಗೌಡ.—ಎಸ್ಟಾಬ್ಲಿಷ್‌ಮೆಂಟ್ ಬಗ್ಗೆ ೫೩.೮ ಲಕ್ಷ ರೂಪಾಯಿಗಳನ್ನು ನಾವು ಖರ್ಚು ಮಾಡುವವರಾಗಿದ್ದೇವೆ. ಇದರಲ್ಲಿ ೫೫.೬ ಲಕ್ಷ ರೂಪಾಯಿಗಳನ್ನು ಇಂಡಿಯಾ ಸರ್ಕಾರದವರು ಕೊಡುತ್ತಾರೆ. ೧೪.೨ ಲಕ್ಷ ರೂಪಾಯಿಗಳನ್ನು ರಾಜ್ಯ ಸರ್ಕಾರದವರು ಕೊಡುತ್ತಾರೆ.

ಶ್ರೀ ಡಿ. ಎಂ. ಸಿದ್ದಯ್ಯ.—ಈ ಪ್ಯಾಕೇಜ್ ಕಾರ್ಯಕ್ರಮಕ್ಕಾಗಿ 5 ಕೋಟಿ ರೂಪಾಯಿಗಳನ್ನು ಮೂರನೇ ಪಾಂಚವಾರ್ಷಿಕ ಯೋಜನೆಯಲ್ಲಿ ಖರ್ಚು ಮಾಡ ಬೇಕೆಂದು ಹೇಳುತ್ತಿದ್ದೀರಿ. ಇಷ್ಟು ದಿವಸಗಳವರೆಗೆ ಕೇವಲ ಎಂಟು ಲಕ್ಷ ಚಿಲ್ಲರೆ ಮಾತ್ರ ಖರ್ಚು ಮಾಡಿದ್ದೀರಿ. ಈ ಕಾರ್ಯಕ್ರಮ ತೃತೀಯ ಪಾಂಚವಾರ್ಷಿಕ ಯೋಜನೆ ಮುಗಿಯುವುದರೊಳಗಾಗಿ ಮುಗಿಯುತ್ತದೋ?

ಶ್ರೀ ಜಿ. ನಾರಾಯಣಗೌಡ.—ಆ ಪ್ರಶ್ನೆಗೆ ಆಗಲೇ ಉತ್ತರ ಕೊಟ್ಟಿದ್ದೇನೆ. ಆ ಯೋಜನೆಯ ಅವಧಿಯೊಳಗೇ ಒಟ್ಟು ಐದು ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕೆಂಬ ಒಂದು ಯೋಜನೆಯನ್ನು ಇಟ್ಟು ಕೊಂಡಿದ್ದೇವೆ.

ಶ್ರೀ ಬಿ. ಹುಚ್ಚೇಗೌಡ.—ಈ ಐದು ಕೋಟಿ ರೂಪಾಯಿಗಳ ಪೈಕಿ ರೈತರಿಗೆ ಸಾಲವಾಗಿ ಮತ್ತು ಸಬ್ಸಿಡಿರೂಪವಾಗಿ ಎಷ್ಟು ಹಣವನ್ನು ಕೊಡುತ್ತೀರಿ?

ಶ್ರೀ ಜಿ. ನಾರಾಯಣಗೌಡ.—ನಮಗೆ ಈ ಕಾರ್ಯದ ಸ್ಯಾಫಿಗೋಸ್ಕರವಾಗಿ ಕೇಂದ್ರಸರ್ಕಾರದಿಂದ ಸಬ್ಸಿಡಿ ರೂಪವಾಗಿ ಬರುವುದು ಶೇಕಡ 75 ಭಾಗ, ಆದರೆ ರೈತರಿಗೆ ಸಾಲದ ರೂಪವಾಗಿ ಕೊಡುವ ಭಾಗ ಎಷ್ಟೆಂಬುದನ್ನು ಹೇಳುವುದಕ್ಕೆ ಈಗ ನನ್ನಲ್ಲಿ ಆ ಮಾಹಿತಿ ಇಲ್ಲ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಈ ಪ್ಯಾಕೇಜ್ ಕಾರ್ಯಕ್ರಮವನ್ನು ಕೇವಲ ಮಂಡ್ಯಾ ಒಂದು ಜಿಲ್ಲೆಯಲ್ಲಿ ಮುಗಿಸುವುದಕ್ಕೆ ಐದು ವರ್ಷಗಳ ಅವಧಿ ಬೇಕು ಎಂದು ಹೇಳಿದ ಮೇಲೆ ಆ ಕಾರ್ಯಕ್ರಮವನ್ನು ಎಲ್ಲಾ ಜಿಲ್ಲೆಗಳಲ್ಲೂ, ಅಂದರೆ ಇಡೀ ಸಂಸ್ಥಾನಕ್ಕೆ ಅನ್ವಯಿಸುವುದಾದರೆ ಇನ್ನೆಷ್ಟು ವರ್ಷಗಳು ಬೇಕಾಗುತ್ತದೆ?

Mr. SPEAKER.—I disallow this question.

ಶ್ರೀ ಜೆ. ದೇವಯ್ಯ.—ಈ ಪ್ಯಾಕೇಜ್‌ಡೀಲ್ ಕಾರ್ಯಕ್ರಮಕ್ಕಾಗಿ ಸರ್ಕಾರದಲ್ಲಿ ಈಗ ಎಷ್ಟು ಬುಲ್ ಡೋಜರ್ಸ್‌ಗಳು ಮತ್ತು ಟ್ರಾಕ್ಟರುಗಳು ಇವೆ?

ಶ್ರೀ ಜಿ. ನಾರಾಯಣಗೌಡ.—ನನ್ನಲ್ಲಿ ಈಗ ಆ ಮಾಹಿತಿ ಇಲ್ಲ.

Graduates working as Second Division Clerks in the State.

Q.*—482. **Sri G. MADE GOWDA (Malavalli).—

Will the Government be pleased to state:—

(*a*) the number of Officials working as Second Division Clerks even after passing the degree examinations in the State;

(*b*) will the Government consider such cases to promote them to First Division Clerks?